ಓ ಎಸ್ 85/2022 ಪಿ.ಡಬ್ಲ್ಯೂ: 1

ಇಂದು ದಿ: 09.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದ:

ರಾಚಮ್ಮ ಈಗ ಮೃಪಟ್ಟಿರುತ್ತಾರೆ. ಪ್ರತಿವಾದಿ ರಾಚಮ್ಮರವರ ವಾರಸುದಾರರು. ರಾಚಮ್ಮನ ಮಗ ಕೆಂಪಣ್ಣ ನನಗೆ ಗೊತ್ತು. ಮಗ ಕೆಂಪಣ್ಣ ಮತ್ತು ಗಂಡ ಸಿದ್ದಶೆಟ್ಟಿ ನನಗೆ ಗೊತ್ತು. ಪ್ರತಿವಾದಿಯು ನನ್ನಿಂದ ಪಡೆದ 5 ಲಕ್ಷ ರೂಗಳ ಬಾಬ್ತು ಇಂಡಸ್ ಬ್ಯಾಂಕ್ ನಿಂದ ರೂ.1,47,750/- ಅನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸುಳ್ಳು. ಆದರೆ ಸ್ವಲ್ಪ ಹಣ ಜಮೆ ಆಗಿದೆ. ನನ್ನ ಪ್ರಕಾರ ಅಂದಾಜು ರೂ.67,000/- ಜಮೆಯಾಗಿದೆ. ನನ್ನ ಖಾತೆಗೆ ರೂ.1,47,750/- ಫೋನ್ ಪೇ ಮೂಲಕ ಜಮೆಯಾಗಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಗಂಡ ನನಗೆ ಮೈಸೂರಿನಲ್ಲಿ ರೂ. 62 ಸಾವಿರ ಕೊಟ್ಟಿದ್ದಾರೆ ಎಂದರೆ ಸುಳ್ಳು. ದಿನಾಂಕ 11.08.2020ರಂದು ಸಿದ್ದಶೆಟ್ಟಿರವರು 5 ಲಕ್ಷದ ಬಾಬ್ತು ರೂ 50 ಸಾವಿರವರವನ್ನು ಕೊಟ್ಟಿದ್ದಾರೆ ಎಂದರೆ ಸರಿ. ರೂ 50 ಸಾವಿರ ಕೊಟ್ಟ ಬಗ್ಗೆ ವಾದ ಪತ್ರದಲ್ಲಿ ಎಲ್ಲೂ ಹೇಳಿಲ್ಲ ಎಂದರೆ ಸರಿ. ಕೆಂಪಶೆಟ್ಟಿ ಹಾಗೂ ಸಿದ್ದಶೆಟ್ಟಿರವರಿಂದ ಬಂದ ಹಣ ಹಾಗೂ ಸಿದ್ದಶೆಟ್ಟಿರವರು ಕೊಟ್ಟ 50 ಸಾವಿರದ ಬಗ್ಗೆ ವಾದ ಪತ್ರದಲ್ಲಿ ಎಲ್ಲೂ ನಮೂದು ಇಲ್ಲ ಎಂದರೆ ಸರಿ. ಇಷ್ಟು ಹಣ ಕಳೆದು ಪ್ರತಿವಾದಿ ನನಗೆ ರೂ. 4,88,846/- ಕೊಡಲು ಬದ್ದರಿರುತ್ತಾರೆ ಎಂದರೆ ಸರಿ. ಆ ಪೈಕಿ ಕೆಲವು ಪಾವತಿ ಸುಳ್ಳು ಮತ್ತು ಕೆಲವು ಪಾವತಿಯನ್ನು ಒಪ್ಪಿಕೊಳ್ಳುತ್ತೇನೆ. ರೂ.1,47,750/- ಜಮೆ ಆದ ಬಗ್ಗೆ ಪ್ರತಿವಾದಿ ದಾಖಲೆ ಕೊಡಲು ಬದ್ಧರಿರುತ್ತಾರೆ. ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.